ಯಾವದೇ ರಿಪೋರ್ಟನ್ನು ಲೇಖಿ ಬರೆಯಿಸಿಕೊಳ್ಳಬೇಕು, ಅದಕ್ಕೆ ಸಹಿ ತೆಗೆದುಕೊಳ್ಳಬೇಕು. ಹೀಗೆ ಮಾಡಿದರೆ ಮುಂದೆ ಯಾವ ತೊಂದರೆಯೂ ಬರುವುದಿಲ್ಲ. ಇದೊಂದು ನನ್ನ ಸೂಚನೆಯಾಗಿದೆ.

ಇನ್ನು ಕ್ಲಾಜ್ 6 (2)ರಲ್ಲಿ ಈ ರೀತಿ ಇದೆ—

"6 (2) Whenever a village accountant makes an entry in the register of mutations he shall at the same time post up a complete copy of the entry in a conspicuous place in the chavadi, and shall give written intimation to all persons appearing from the record of rights or register of mutations to be interested in the mutation, and to any other person whom he has reason to believe to be interested therein."

ಇದೇ ರೀತಿಯಾಗಿ ಮುಂಬಯಿ ಕಾನೂನಿನಲ್ಲಿ ಇದೆ. ಈ ರೀತಿ ಮಾಡುವುದು ಒಳ್ಳೆಯದು. ಮುಂದೆ ಯಾವ ತರಹದ ತೊಂದರೆ ಬರಬಹುದೆಂದು ಗೊತ್ತಾಗುವುದಿಲ್ಲ. ಈ ರೀತಿಯಾಗಿ ಸಂಬಂಧಪಟ್ಟವರಿಗೆ intimation ಕೊಟ್ಟರೆ ಮುಂದೆ ಯಾವ ಸಂದೇಹಕ್ಕೂ ಆಸ್ಪದ ಉಳಿಯುವದಿಲ್ಲ. ಆದಕಾರಣ ಹಕ್ಕುಬಾಧ್ಯತೆಗಳಿಗೆ ಸಂಬಂಧಪಟ್ಟವರಿಗೆಲ್ಲ ಏನು ತಿದ್ದುಪಡಿಮಾಡಬೇಕೆಂದು ರಿಪೋರ್ಟಬಂದಿದೆ ಎಂಬುದನ್ನು ಸಹ ತಿಳಿಸುವುದು ಒಳ್ಳೆಯದು ಎಂದು ನನ್ನ ಸೂಚನೆಯಾಗಿದೆ.

ಇನ್ನು ಕ್ಲಾಜ್ 6 ಸಬ್‌ಕ್ಲಾಜ್ (4)ರಲ್ಲಿ ಈ ರೀತಿ ಇದೆ:

"6 (4) Orders disposing of objections entered in the register of disputed cases shall be recorded in the register of mutations by such officer and in such manner as may be prescribed by rules made by the State Government in this behalf."

ಯಾವ ಆರ್ಡರ್ ಪಾಸ್ ಮಾಡುತ್ತಾರೋ ಅಂಥ ಆರ್ಡರದ ನಕಲನ್ನೂ ಸಹ ಸಂಬಂಧಪಟ್ಟವರಿಗೆ ಕಳಿಸಿಕೊಡಬೇಕು ಎಂಬುದಕ್ಕೆ ಒಂದು ತಿದ್ದುಪಡಿ ಆಗಬೇಕು ಎಂದು ನನ್ನದು ಮತ್ತೊಂದು ಸೂಚನೆ ಆಗಿದೆ.

ಇನ್ನು ಕ್ಲಾಜ 11ರಲ್ಲಿ ಈ ರೀತಿ ಇದೆ :

"11. *Certified copies of Records to be annexed to plaint or application.*—(1) The plaintiff or applicant in every suit or application as hereinafter defined relating to land situated in any area to which this Act applies and in which the record of rights has been maintained shall annex to the plaint or application a certified copy of any entry in the record of rights, or register of mutations relevant to such land."

ಈ ಕಲಮಿನ ಬಗ್ಗೆ ಕೆಲವು ಮಾನ್ಯ ಮಿತ್ರರು ಟೀಕೆ ಮಾಡಿದರು. "Certified copies of Records to be annexed to plaint or application." ಇದು ಅವಶ್ಯಕವಿಲ್ಲ, ಈ ಕಲಮನ್ನು ತೆಗೆದುಹಾಕಬೇಕೆಂದು ಹೇಳಿದರು. ಇದೇ ತರಹದ ಕಾನೂನು ಮುಂಬಯಿ ರಾಜ್ಯದಲ್ಲಿ ಇದೆ. ಈ ಬಗ್ಗೆ ಅಲ್ಲಿ ಯಾವ ತೊಂದರೆಯೂ ಆಗಿಲ್ಲ. ಒಬ್ಬ ಆಫೀಸರ್ ಅಥವಾ ಜಡ್ಜ ಮುಂದೆ ಒಂದು ವ್ಯಾಜ್ಯ ಕೋರ್ಟಿನಲ್ಲಿ ಹೂಡಲ್ಪಡುತ್ತದೆ. ಆಗ ಸಂಬಂಧಪಟ್ಟ ರಿಕಾರ್ಡುಗಳ ಸರ್ಟಿಫೈಡ್ ಕಾಫಿ ಹಾಜರ್‌ಪಡಿಸಿದ್ದರೆ ಅದನ್ನೇ ಆಧಾರವಾಗಿಇಟ್ಟುಕೊಂಡು ಒಂದು ತೀರ್ಮಾನ ಕೊಡಲು ಅನುಕೂಲವಾಗುತ್ತದೆ. ಈಗ ಮಸೂದೆಯಲ್ಲಿ ಇರುವುದು ಒಳ್ಳೆಯದು ಆಗಿದೆ ಎಂದು ನನ್ನ ಅಭಿಪ್ರಾಯ. ಹೀಗೆ ಇರುವದರಿಂದ ಮುಂದೆ ಯಾವ ತಕರಾರೂ ಬರುವದಿಲ್ಲ. ಆದಕಾರಣ ಇದಕ್ಕೆ ವಿರೋಧಮಾಡಬಾರದು. ಇದರಿಂದ ಯಾವ ತೊಂದರೆಯೂ ಆಗುವುದಿಲ್ಲ. ಈಗ ಇರುವಂತೆಯೇ ಇದ್ದರೆ ಒಳ್ಳೆಯದೆಂದು ನನ್ನ ಅಭಿಪ್ರಾಯ.

ಇನ್ನು ಸಬ್‌ಕ್ಲಾಜ್ (3) ಮತ್ತು (4) ನೋಡಿದರೆ ಇದು ಸ್ಪಷ್ಟವಾಗಿ ಕಂಡು ಬರುತ್ತದೆ.

ಯಾವುದು ಒಂದು ಸರ್ಟಿಫೈಡ್‌ಕಾಪಿ ಆ ಭೂಮಿಗೆ ಸಂಬಂಧಪಟ್ಟದ್ದು ಇದೆ ಅದರ ಪ್ರಕಾರ ಕೋರ್ಟಿನವರು ನಿರ್ಣಯ ಕೊಟ್ಟರೆ ಆ ನಿರ್ಣಯದ ಪ್ರಕಾರ ಒಪ್ಪಬೇಕಾಗುತ್ತದೆ. ಆ ಕಾಪಿಯನ್ನು ರಿಕಾರ್ಡ್ ಆಫ್ ರೈಟ್ಸ್‌ಗೆ ಸಂಬಂಧಪಟ್ಟ ರೆವಿನ್ಯೂ ಅಧಿಕಾರಿಗಳು ಕಳುಹಿಸುತ್ತಾರೆ ಮತ್ತು ಅದಕ್ಕನುಸಾರವಾಗಿ ನಡೆಯುತ್ತದೆ ಎಂದ ಮೇಲೆ ರೆವಿನ್ಯೂ ಆಫೀಸರು ಒಂದು entry ಮಾಡಿ ಅದರ ಮೇಲೆ ಸಿವಿಲ್ ಕೋರ್ಟ್‌ನಲ್ಲಿ ನಿರ್ಣಯ ಆದದ್ದಕ್ಕೆ ಹೆಚ್ಚು ಮಹತ್ವವುಂಟಾಗುತ್ತದೆ ಎಂದು ಒಪ್ಪಿಕೊಳ್ಳುವುದರಿಂದ ಸಿವಿಲ್ ಕೋರ್ಟಿನ ನಿರ್ಣಯ ಅಖೈರು ಎಂದು ಒಪ್ಪುತ್ತಾ ಇದ್ದೀರಿ. ರೆವಿನ್ಯೂ ಅಧಿಕಾರಿಗಳ ಮುಖಾಂತರ ಈ ತಿದ್ದುಪಡಿ ಆಗುತ್ತದೆ ಎಂದ ಮೇಲೆ ಇದು ಇರತಕ್ಕದ್ದು ಅವಶ್ಯಕ ಎಂಬುದು ಮನವರಿಕೆಯಾಗುತ್ತದೆ. ಇದು ಉತ್ತಮವಾದ ಕಲಮು, ಇದರ ಸಂಬಂಧಿ ತಕರಾರು ಮಾಡಬಾರದು.

13ನೆಯ ಕಲಂ 'Presumption of correctness of entries in record of rights and register of mutations' ಎಂಬುದರ ಸಂಬಂಧಿ ಸಹಿತ ಕೆಲವು ಮಂದಿ ಬಹಳವಾಗಿ ಟೀಕೆಮಾಡಿದರು. ಇದರೊಳಗೆ ಅನಾನುಕೂಲವಾದಂಥ ಯಾವ ಅಂಶವೂ ಇಲ್ಲ. Presumption ಎಂದರೆ ಇಷ್ಟು ಇದೆ. "An entry in record of rights and certified entry in the register of mutations shall be presumed to be true until the contrary is proved or a new entry is lawfully substituted therefor."

ಎಲ್ಲಾದರೂ ಒಂದು ಕೋರ್ಟಿಗೆ, ಯಾವುದಾದರೂ ಒಂದು ಕೋರ್ಟಿಗೆ ಪುರಾವೆಕೊಟ್ಟು ಈ entry ಒಳಗೆ ಇರತಕ್ಕ ಅಂಶ ತಪ್ಪು ಎಂದು ಕೋರ್ಟಿನವರು ಒಂದು ನಿರ್ಣಯಕ್ಕೆ ಬರುವವರೆಗೂ ಇದೇ ಸರಿ ಎಂದು ಆಗುತ್ತದೆ. ಅಷ್ಟೇ ಹೊರತು ಮತ್ತೆ ಬೇರೆ ಏನೂ ಇಲ್ಲ. ಈ 13ನೆಯ ಕಲಂ ಬಿಟ್ಟರೆ ಈ ರೆಕಾರ್ಡ್ ಆಫ್ ರೈಟ್ಸ್ ಬಿಲ್ ಏನಿದೆ ಇದರ ಮಹತ್ವವೇ ಹೊರಟು ಹೋಗುತ್ತದೆ. ಈ ಪ್ರಿಸಂಪ್ಷನ್ ಇಲ್ಲದೇ ಇದ್ದರೆ entry of the certificatesಗೆ ಮಹತ್ವವೇ ಇರುವುದಿಲ್ಲ. ಆದ್ದರಿಂದ ಇದಕ್ಕೆ ಸದಸ್ಯರು ಒಪ್ಪಿಗೆ ಕೊಡಬೇಕೆಂದು ಹೇಳುತ್ತೇನೆ.

(ಶ್ರೀ ಎಂ. ಆರ್. ಪಾಟೀಲ್)

ಇನ್ನು 15ನೆಯ ಕಲಮು. ಇದರಲ್ಲೂ ಸಹಿತ ಮಿತ್ರರು ಅನೇಕರು ತಕರಾರು ಮಾಡಿದರು. ಇದರ ಸಂಬಂಧಿ, ಯಾವ ಒಬ್ಬ ರೆವಿನ್ಯೂ ಅಧಿಕಾರಿ ಸರ್ಟಿಫೈ ಮಾಡಿದ entry ಮೇಲೆ ದಾವೆಮಾಡಲಿಕ್ಕೆ ಬರುವುದಿಲ್ಲ. "No suit shall be against the Government or any officer of Government in respect of a claim to have an entry made in any record or register that is maintained under this Act, or to have any such entry omitted or amended." ಈ ಪ್ರಕಾರ ಕಾಯಿದೆ ಇಲ್ಲದೇ ಇದ್ದರೆ ಪ್ರತಿಯೊಂದು entry ಸಂಬಂಧಿ ಸರ್ಕಾರದ ಮೇಲೆ, ಸರ್ಕಾರಿ ಅಮಲ್ದಾರರ ಮೇಲೆ ಕೋರ್ಟು, ಕಚೇರಿಯಲ್ಲಿ, ವ್ಯವಹಾರ ನಡೆದು ವೇಳೆ ಹೋಗಬಹುದು. ಆದ್ದರಿಂದ ಇದರ ಸಂಬಂಧಿ ಮಾನ್ಯ ಸದಸ್ಯರು ತಕರಾರು ಮಾಡಲಿಕ್ಕಿಲ್ಲ ಎಂದುಕೊಂಡಿದ್ದೇನೆ. ಈ ವಿಷಯಗಳನ್ನೆಲ್ಲಾ ಸರ್ಕಾರದವರು ನಜರಿಗೆ ತೆಗೆದುಕೊಂಡು,—ಬಹುತೇಕ ಇದು ಸೆಲೆಕ್ಟ್ ಕಮಿಟಿಗೆ ಹೋಗಬಹುದು—ಅಲ್ಲಿ ಈ ಸೂಚನೆಗಳನ್ನೆಲ್ಲಾ ಇಟ್ಟುಕೊಂಡು ಸೂಕ್ತ ತಿದ್ದುಪಡಿ ಮಾಡುತ್ತಾರೆ ಎಂದು ನಾನು ಆಶಿಸುತ್ತೇನೆ.

4-30 P.M.

[Sri N. O. SAMAJI (Belgaum II) spoke in Marathi.]

*ಶ್ರೀ ಬಿ. ಎಸ್ ಶಂಕರಪ್ಪ (ಹೊಸದುರ್ಗ).—ಮಾನ್ಯ ಅಧ್ಯಕ್ಷರೆ, ನಮ್ಮ ಮುಂದಿರತಕ್ಕ ಈ ಮಸೂದೆ ಮುಖ್ಯವಾದುದು. ಶೇಕಡ 75ಜನ ಅವಿದ್ಯಾವಂತರಾದ ರೈತರು ನಮ್ಮ ದೇಶದಲ್ಲಿದ್ದಾರೆ. ಆದ್ದರಿಂದ ಈ ಕಾನೂನನ್ನು ಜಾರಿಗೆತರುವುದು ಬಹಳ ಸೂಕ್ತ. ಈ ಸಭೆಯಲ್ಲೂ ಹಿಂದಿನ ಈ ಸಭೆಯ ಅಧಿವೇಶನಗಳಲ್ಲೂ ಖೋತಾಸೂಚನೆಗಳ ಮೂಲಕ ಈ ಒಂದು ಹಕ್ಕುಬಾಧ್ಯತೆ ವಿಷಯದಲ್ಲಿರುವ ಲೋಪ ದೋಷಗಳನ್ನು ಬಹಳ ದಿವಸಗಳಿಂದ ಗಮನಕ್ಕೆ ತಂದು ಅವುಗಳನ್ನು ನಿವಾರಿಸಬೇಕೆಂದು ಒತ್ತಾಯ ಮಾಡುತ್ತಲೇ ಬಂದಿದ್ದಾರೆ.

ಒಂದನೆಯದಾಗಿ ನಮ್ಮ ಹಳೆಯ ಮೈಸೂರು ಪ್ರದೇಶದಲ್ಲಿರುವ ಲೋಪ ದೋಷವೇನೆಂದರೆ, ಕೆಲವು ತಾಲ್ಲೂಕುಗಳಲ್ಲಿ ಎರಡುಸಾವಿರಕ್ಕಿಂತ ಹೆಚ್ಚು ಸಂದರ್ಭಗಳಲ್ಲಿ ಮ್ಯುಟೇಷನ್ ವಿಚಾರ ತೀರ್ಮಾನವಾಗದೆ ನಿಂತಿದೆ. ಇದಕ್ಕೆ ಕಾರಣವೇನು ಎಂಬುದನ್ನು ಪರಿಶೀಲಿಸಿ ಕಾನೂನಿನಲ್ಲಿ ಕೆಲವು ತಿದ್ದುಪಡಿ ಮಾಡಬೇಕಾಗುತ್ತದೆ. ನಮ್ಮ ದೇಶದಲ್ಲಿ ಸಾಧಾರಣವಾಗಿ ಹಕ್ಕು ಬದಲಾವಣೆಯಾಗುವುದು ರಿಜಿಸ್ಟ್ರೇಷನ್ ಆಫೀಸಿನಲ್ಲಿ; ಅದನ್ನು ಬಿಟ್ಟರೆ ಪವತಿಪಟ್ಟ ವರ್ಗಾವರ್ಗಿ ಆದಾಗ ಬದಲಾವಣೆಯಾಗುತ್ತದೆ. ಒಬ್ಬ ಜಮೀನುದಾರ ಫವತಿಯಾದರೆ ಆಗ ಮತ್ತು ವರ್ಗಾವರ್ಗಿ ಆಗುವಾಗ ಹಕ್ಕುದಾರರು ಅಮಲ್ದಾರರ ಹತ್ತಿರಹೋಗಿ ತಮ್ಮ ಹಕ್ಕನ್ನು ಸ್ಥಿರಪಡಿಸಿ ತಕ್ಕ ಬದಲಾವಣೆ ರಿಕಾರ್ಡಿನಲ್ಲಿ ಮಾಡಿಸಿಕೊಳ್ಳಬೇಕಾಗುತ್ತದೆ. ಇವು ಎರಡನ್ನೂ ಬಿಟ್ಟರೆ ಸಬ್ ರಿಜಿಸ್ಟ್ರಾರ್ ಅವರ ಆಫೀಸುಗಳಲ್ಲಿ ಪತ್ರ ರಿಜಿಸ್ಟ್ರಾಗುವುದರ ಆಧಾರದಮೇಲೆ ಹಕ್ಕು ಬದಲಾವಣೆಯಾಗುತ್ತದೆ. ಸಬ್ ರಿಜಿಸ್ಟ್ರಾರ್‌ರವರ ಆಫೀಸಿನಲ್ಲಿ ಯಾರಸ್ವತ್ತನ್ನು ಯಾರು ಬೇಕಾದರೂ ಈ ದಿವಸ ಫೀಜನ್ನು ಕೊಟ್ಟು ರಿಜಿಸ್ಟರ್ ಮಾಡಿಸಿಕೊಳ್ಳಬಹುದು. ಫೋಡಿಫೀಜು ಮತ್ತು ಮ್ಯುಟೇಷನ್ ಫೀಜು-ಇವನ್ನೂ ತೆಗೆದುಕೊಳ್ಳುತ್ತಾರೆ. ಮ್ಯುಟೇಷನ್ ಫೀಜಿಗೆ ವ್ಯವಹಾರಮಾಡದರೆ ಸಾಧ್ಯವಿಲ್ಲ. ಕಂದಾಯ ಕೊಡದಿದ್ದರೆ ಮ್ಯುಟೇಷನ್ ಆಗುವುದು ಜಾಸ್ತಿಯಾಗುತ್ತದೆ. ಈ ಸಂಬಂಧವಾದ ತೊಂದರೆ ತಪ್ಪಿಸಲು ಸಬ್ ರಿಜಿಸ್ಟ್ರಾರ್ ಅವರ ಆಫೀಸಿನಲ್ಲಿ ರಿಜಿಸ್ಟರ್ ಆಗುವಾಗ ಅಪಾಯ ಜಾಸ್ತಿಯಾಗುವುದನ್ನು ತಪ್ಪಿಸಲು ಮ್ಯುಟೇಷನ್ ವಿಚಾರದ ಬಗ್ಗೆ ಸರಿಯಾದ ನಿಯಮವನ್ನು ಹಾಕಿ ಮೊದಲು ಕ್ರಮಪಡಿಸಬೇಕಾದದ್ದು ಅಗತ್ಯ. ಹೀಗೆ ಮಾಡಿದರೆ ಪತ್ರ ರಿಜಿಸ್ಟರಾಗುವಾಗ ಇರುವ ಲೋಪ ನಿವಾರಣೆಯಾಗುವುದರಿಂದ ಮ್ಯುಟೇಷನ್ ಗಲಾಟೆಯೂ ಸಹ ಕಡಮೆಯಾಗುತ್ತದೆ.

ಎರಡನೆಯದಾಗಿ ಈ ದಿವಸದವರೆಗೆ ಮ್ಯುಟೇಷನ್ ವಿಚಾರದಲ್ಲಿ ಜವಾಬ್ದಾರಿ ತಾಲ್ಲೂಕು ಅಮಲ್ದಾರರಿಗೆ ಮತ್ತು ಗ್ರಾಮಾಧಿಕಾರಿಗಳಿಗೆ ಇತ್ತು; ಗ್ರಾಮಾಧಿಕಾರಿಗಳಿಗೆ ಮ್ಯುಟೇಷನ್ ರಿಜಿಸ್ಟರನ್ನು ಕೊಟ್ಟು ಅವರು ಅದರಲ್ಲಿ ದಾಖಲೆಮಾಡುವ ವ್ಯವಸ್ಥೆಯಿತ್ತು. ರಿಕಾರ್ಡ್ ಇರುವಾಗ ಈ ದಿವಸ ದಾಖಲೆಮಾಡುವುದಿಲ್ಲ. ಈಗಿನ ಪ್ರಜಾಪ್ರಭುತ್ವದಲ್ಲಿ ಒಬ್ಬ ಗ್ರಾಮಾಧಿಕಾರಿಗೆ ಹೆಚ್ಚು ಅಧಿಕಾರ ಈಬಿಲ್ಲಿನಲ್ಲಿದೆ. ಆದರೆ ಅದರಿಂದೇನು ಪ್ರಯೋಜನ ? ಒಬ್ಬ ಅವಿದ್ಯಾವಂತ ರೈತ ತನ್ನ ಹಕ್ಕುದಾರಿ ವಿಷಯದಲ್ಲಿ ಆಗುವ ಬದಲಾವಣೆಯನ್ನು ಸಕಾಲದಲ್ಲಿ ಗ್ರಾಮಾಧಿಕಾರಿಗಳಿಗೆ ತಿಳಿಸಬೇಕೆಂದು ಹೇಳಿದರೆ ಅದು ಅವನಿಗೆ ಸಾಧ್ಯವೆ ? ಈ ಮಸೂದೆಯಲ್ಲಿ ಜವಾಬ್ದಾರಿಯನ್ನು ಅವಿದ್ಯಾವಂತರಿಗೆ ಹೆಚ್ಚಾಗಿ ಹೊರಿಸಿದೆ. ಅವರು ನಿಗದಿಮಾಡಿರುವ ಕಾಲದೊಳಗೆ ಸಮಾಚಾರ ಕೊಡದಿದ್ದರೆ 25 ರೂಪಾಯಿಗಳ ದಂಡ ತೆರಬೇಕಾಗುತ್ತದೆ. ಈ ತೊಂದರೆಯನ್ನು ಅವಿದ್ಯಾವಂತರಿಗೆ ತಪ್ಪಿಸಲು ವಿದ್ಯಾವಂತರು ಹೋಗಿ ಅವರಿಂದ ದಾಖಲೆ ಪತ್ರದ ಕಾಪಿ ತೆಗೆದುಕೊಂಡು ತಾಲ್ಲೂಕಿನಲ್ಲಿ ನಡೆಯುವ ತಾಲ್ಲೂಕು ಜಮಾಬಂದಿ ಅಥವಾ ಹುಜೂರು ಜಮಾಬಂದಿಕಾಲದಲ್ಲಿ ಜಮಾಬಂದಿ ಆಫೀಸರು ಮ್ಯುಟೇಷನ್ ಆಗಬೇಕಾದ ಪಟ್ಟಿ ತೆಗೆದುಕೊಂಡು ಪಾರ್ಟಿಗಳಿಗೆ ನೋಟೀಸುಕೊಟ್ಟು ಅವರನ್ನು ಬರಮಾಡಿಕೊಂಡು ವಿಚಾರ ಫೈಸಲು ಮಾಡುವುದಾದರೆ ಇರುವ ಲೋಪ ದೋಷ ಕಡಮೆಯಾಗಬಹುದು.

ಮೂರನೆಯದಾಗಿ, ಇಂಥ ಕಾನೂನುಗಳನ್ನು ಬಹಳ ಜಾಸ್ತಿಯಾಗಿ ಮಾಡುತ್ತಾ ಹೋದರೂ ಸಹ ಅವಿದ್ಯಾವಂತರಿಗೆ ಕಿರುಕುಳ ಜಾಸ್ತಿಯಾಗುತ್ತದೆ; ಸ್ವಾಭಾವಿಕವಾಗಿ ಎಷ್ಟು ಅವಶ್ಯಕವೋ ಅಷ್ಟನ್ನು ಮಾಡಬೇಕು. ಮಾಡಿದ ಕಾನೂನನ್ನು ಶೀಘ್ರವಾಗಿ ಜಾರಿಗೆ ತರಬೇಕು, ಅವಶ್ಯಕವಾದರೆ ಅಮೇಲೆ ತಿದ್ದುಪಡಿ ಮಾಡುಬಹುದು. ಕಾನೂನಿನ ಹೊರೆ ಹೆಚ್ಚಾಗಿ ಹೇರಿದರೆ ರೈತರಿಗೆ ಕಿರುಕುಳ ಹೆಚ್ಚು, ಅವಿದ್ಯಾವಂತ ರೈತರ ಮೇಲೆ ಹೆಚ್ಚು ಜವಾಬ್ದಾರಿ ಹೇರುವುದಕ್ಕೆ ಬದಲಾಗಿ ಅಧಿಕಾರಿಗಳಿಗೇ ಈ ಒಂದು ಕೆಲಸವನ್ನು ಸಕಾಲದಲ್ಲಿ ಮಾಡಬೇಕೆಂದು ಕಡ್ಡಾಯ ಮಾಡಿ ಆಡಳಿತವರ್ಗದವರ ಮೇಲೆ ಈ ಹೊರೆ ಹೊರಿಸುವಂತೆ ಕಾನೂನಿನಲ್ಲಿ ಅವಕಾಶಮಾಡಬೇಕು ; ತಿಳಿವಳಿಕೆಯಿಲ್ಲದಿರುವ ರೈತರಿಗೆ ಅನ್ಯಾಯಮಾಡಬಾರದು. ಈ ವಿಚಾರಗಳನ್ನೆಲ್ಲಾ ಪರಿಶೀಲನೆಮಾಡಲು ಈ ಮಸೂದಾಕಾನೂನನ್ನು ನನ್ನ ಮಾನ್ಯ ಸ್ನೇಹಿತರು ಹೇಳಿರುವ ಹಾಗೆ ಒಂದು ಸೆಲೆಕ್ಟ್‌ಕಮಿಟಿಗೆ ಕಳಿಸಿ ಅಲ್ಲಿ 8, 11 ಮತ್ತು 16ನೆಯ ಸೆಕ್ಷನ್‌ಗಳ ಪ್ರಕಾರ ರೈತರಿಗೇನು ತೊಂದರೆಯಾಗುತ್ತದೆಂದು ಸಲಹೆ

ಮಾಡಿದೆಯೋ ಅವನ್ನು ನಿವಾರಿಸಬೇಕು. ಅನುಭವವಿರುವವರನ್ನು ಆ ಸಮಿತಿಗೆ ಹಾಕಿ ಸರಿಯಾಗಿ ತಿದ್ದುಪಡಿ ಮಾಡಿ ಇರುವ ಲೋಪ ದೋಷಗಳನ್ನು ತೊಡೆದು ಹಾಕಿ ಮತ್ತೊಂದು ಸಲ ಈ ಸಭೆಯು ಮುಂದೆ ಈ ಕಾನೂನನ್ನು ತಂದು ಅನುಮೋದನೆ ಪಡೆಯಬೇಕು, ಅವಿದ್ಯಾವಂತರಿಗೆ ತೊಂದರೆ ತಪ್ಪಿಸಬೇಕು ಎಂದು ಸಲಹೆ ಮಾಡುತ್ತೇನೆ.

Sri V. S. PATIL (Belgaum I)—Sir, this Bill—the Mysore Land Record of Rights Bill ought to have been introduced along with the Bill relating to land revenue. This Bill is part of the Bill relating to land revenue, and so there ought to have been a comprehensive Bill relating to land. This Bill cannot be a separate entity because it deals with land and its revenue and its records; it forms part of the land revenue and so far as the Bombay area is concerned, it is part of the Land Revenue Code. So my submission is, in the first place Government should introduce a Bill which should deal with land revenue of the State and this land record of rights should be a part of the comprehensive Bill and not a separate one.

Then the next point I should like to urge is that, when I read this Bill I feel there are some defects in the various provisions including the definitions that have been incorporated here. So I submit that this Bill be referred to a Select Committee consisting of a small number of members who will within the prescribed time go through it in detail and place before the House the correct position that we require.

Now I come to definitions. Definition No. (3): "To hold land" or "to be a land-holder" or "holder of land" means to be lawfully in possession of land, whether such possession is actual or not. I think this is not a complete definition, it is likely to be misleading. The term 'holder of land' has got a wider meaning than the 'occupant' and so we have to be on safer side in defining 'holder of land' with a clear cut meaning that we assign to this particular term. Then item (8) '"Occupation" means possession.' All these words 'holder' 'occupant', 'occupation' 'Occupancy' which are defined are rather confusing. They do not give any clear idea as to what is meant by these words. These words are to be defined because the executive authority under this scheme is the village officer. So the definition of all these words, namely, occupant, holder, landlord, lessee, etc., must be very clear and specific. We have come across many cases even in the High Court where these words which have been defined have created and will create differences of opinion among the judges. Therefore it will not be possible for the village officer to understand what they mean. I submit that these definitions require to be modified in a certain sense so as to give full meaning which will not create any sort of ambiguity or doubt in the minds of those who are entrusted with the working and execution of this Act.

The next item is (17) where the definition of 'tenant' has been given. The definition runs thus:

> "'Tenant' means a lessee, whether holding under an instrument or under an oral agreement, and includes a mortgagee of a tenant's rights with possession; but does not include a lessee holding directly under Government."

But what about the Statutory tenants? Under the Bombay Tenancy Act a person who holds land is presumed to be a tenant, if he is not an owner, the tenancy right is given to the person who cultivates the land. A tenant under the law is not included here. What has become of those tenants who have been given the status of tenants under the Tenancy Act in the Bombay area? Are they to be treated as trespassers? So all these defects ought to be remedied by sending this Bill to a Select Committee.

Then, the next item is (18) "Village" includes a town or city and all the land belonging to a village, town or city. Here, the word "belonging" is not justifiable because I submit all lands belong to the State. They do not belong to any village or individual. So the word 'belonging' that is introduced here will definitely lead to certain misunderstandings and will lead to confusion. Therefore the word 'belonging'

(SRI V. S. PATIL)

must be excluded from the purview of this particular clause.

Next, I would like to point out that the Explanation that is given under clause 5 is not correct. Clause 5 deals with acquisition of rights to be reported. Explanation I states:

> "The rights mentioned above include a mortgage without possession, but do not include an easement or a charge not amounting to a mortgage of the kind specified in section 100 of the Transfer of Property Act, 1882 (Central Act IV of 1882)."

Here I should like to ask: what is the intention of preparing these record of rights? The main intention is to show in whose favour or in whose possession or occupation these lands are. What are the charges that are there, what are the liabilities that have been created all these details must be included in the record of rights. So if a charge is not mentioned there, or supposing a particular individual has been ordered by a civil court to pay maintenance of certain persons and if that charge is kept on any of his lands that will have to be entered in the record of rights because all those persons who deal with those lands must know the liabilities that have been created. Similarly, if there are any easement rights belonging to tenants, owners, or some others in the village, all those must be mentioned in the record of rights. Otherwise the persons who are likely to deal with those lands will be misled. I therefore submit that the Explanation is not necessary and on the contrary in the definition of 'charge' ought to have been included.

SRI M. P. PATIL.—It is under clause 4.

SRI V. S. PATIL.—I am dealing with clause 5 where Explanation is there.

MR. SPEAKER.—It is given in clause 4,

SRI V. S. PATIL.—It is stated in Explanation I that "the rights mentioned above include a mortgage without possession, but do not include an easement or a charge not amounting to a mortgage" But mere 'charge' is not included there.

SRI M. P. PATIL.—According to clause 4 the record of rights include "the nature and extent of the respective interests of such persons and the conditions or liabilities (if any) attaching thereto". There will be other encumbrances also.

SRI V. S. PATIL.—When such rights are acquired the persons are made to inform the particular village officer. But according to this Explanation the persons concerned in this explanation are not required to do that. That will create a sort of confusion and contradiction between clauses 4 and 5. Therefore I submit there ought to be uniformity.

Coming to clause 6, sub-clause (6) states:

> "Entries in the register of mutations shall be tested and, if found correct, or after correction, as the case may be, shall be certified by such officer as may be specified by the State Government."

Here, the word 'tested' is not correct, it ought to be 'examined'.

Coming to clause 7, sub-clause (2) states:

> "A revenue officer or village accountant to whom any information is furnished or before whom any document is produced in accordance with a requisition under sub-section (1) shall at once give a written acknowledgment thereof to the person furnishing or producing the same and shall endorse on any such document a note under his signature, stating the fact of its production and the date thereof."

Here the persons who acquire these rights are required to produce those documents before the village officer and the village officer is obliged to give an acknowledgment to that effect. But there is nothing to show that the village officer is bound to return those documents when the entries are certified. We have got so many cases in

the rural areas and Bombay City where the documents produced before the village officers are practically never returned to the owners at all. Thus the poor villagers are to put to heavy loss. If they do not intimate there is provision of law which punishes them. But when the documents are produced, years after years they are never returned to the persons concerned. Therefore there must be a provision under which the village officers are bound to return the documents to the persons concerned after the entries have been certified by the highest officers. So some provision will have to be made in this respect for an obligation on the part of the village officers to return the documents to the persons who have produced them.

Then, clause 8, 'Penalty for neglect to afford information.' Here if a certain officer feels that a person has failed to make the report, he has to pay a penalty not exceeding Rs. 25. The words "penalty" and "fees" have got distinct meaning. Here, when there is penalty, the word 'fee' cannot be put in. If there is to be a penalty it is a 'fine' and not 'fee'. The word 'fees' is not proper and it should be corrected as 'fine'.

In clause 9 the proviso to sub-clause (2) is not necessary. The proviso runs as follows :

> "Provided that the total amount of the assessment of any survey number or sub-division shall not be enhanced during any term for which such assessment may have been fixed under any law relating to land revenue in force in the State of Mysore unless such assessment is liable to alteration under the provisions of those laws."

This is a very important thing that has been introduced in this Bill. I should like to submit that the system of taking or fixing the land assessment for a particular or definite period is in vogue for a long time. The assessment is practically the rent due to the Government from an occupant. Even the British Government has introduced this particular system in order to enable the occupants to improve the lands or to have a correct basis for collection of their dues. Now, when we are here and when we know definitely that the prices of agricultural produce have been increased ten times than when the original survey was made —when the land assessments have been fixed before the commencement of the present century—it is no use making such a provision by which occupants are benefitted at the cost of the Government. They are not paying the dues which they ought to have been paying to the Government for the use of the land. So, I submit that such a provision should not be made in order to increase the revenue to the Government to which it is entitled.

In Section 10, three Codes have been mentioned, namely, Bombay Land Revenue Code, Mysore Land Revenue Code, and Hyderabad Land Revenue Act. Instead of adding these, if they had uniform Code there would have been no necessity to refer to these.

In the case of the certified copies, here in Sub-clause (2), the word 'conciliator' has reference to sub-clause 4 para 5 under section 35 of the Deccan Agriculturists' Relief Act. This Act has been repealed long ago and it is not in force at all now. Therefore, I do not know why this provision has been made. But, on the contrary provision for the land revenue ought to have been made.

There is a provision in the Bill for refusal of assistance. That means the Revenue Officers have been empowered to grant assistance. When these Revenue Officers grant the assistance it is not a court but they are merely Revenue Officers. So, suitable provision must be made in clause 11. When there is the word 'court' there must be an officer of the Government and when applications are made to the officer the certified copies must be attached to them. So, instead of conciliation, assistance granting Officers must be there. I think this Bill requires some consideration at the hands of the Select Committee and I request the Government to deal with this matter a bit carefully rather than come next time for additions or subtractions in the Bill.

Sri F. H. MOHSIN (Hubli City).—I rise to support the Bill moved by the Hon'ble Minister.

Sir, it is a step in the direction of bringing in uniform legislation in the whole State. In Hyderabad there was a different system of maintenance of record of rights, So also in Bombay, old Mysore and some other areas. This Bill intends to have a uniform system of maintenance of records throughout the State. It is our experience that the system prevailing in Bombay has been working successfully. That will help the decision of the mutation disputes as early as possible. In the old Mysore area, it is learnt that huge amount of work is yet pending and many of the disputes have not been decided. It is certain that if this legislation is adopted there will be a speedy disposal of this heavy file. This legislation empowers the village accountant to maintain the registers of the Record of Rights and also mutation registers. It is true that village accountants some times are not reliable, but if a check is maintained upon them it is very easy to have proper maintenance of these records. After all we are giving the authority of the final decision in the case of disputes to higher officers. We are giving them an opportunity to maintain the record and to register the disputes and send them on to the higher officers, and there will be no scope for mischief. It is a common experience that sometimes even when mutation is effected in the register on the report of some person usually the village accountant does not give notice of such information to all those persons who are interested in the land. To stop this, I propose that the village accountants should be made to give such intimations to all those persons whose names stand in the Record of Rights or who are interested in the lands, *in writing* and that too by registered post or under Certificate of Posting. This will stop the fear of any mischief on the part of the village accountants.

Clauses 4 and 5 are the main provisions of this Bill and they relate to the procedure and maintenance of registers of Record of Rights and for the maintenance of the mutation registers. There is also a provision for appeal over the decision of the Tahsildar and also a provision for revision to the Deputy Commissioner concerned. The only thing that I wish to suggest is that this provision was embodied in chapter 10-A of the Bombay Land Revenue Code. So far as Bombay areas are concerned, the term Collector and Mamlatdar still remain in the Bombay Land Revenue Code. In this chapter it is mentioned that the revisional power are vested with the Deputy Commissioner. I think this will be rather inconsistent with the other provisions of the Bombay Land Revenue Code.

It is our experience that even in deciding tenancy matters and the disputes under the Bombay Land Revenue Codes, the officers are confused whether to use the old words Collector or Mamlatdar or the new terms Deputy Commissioner or the Tahsildar. Only by an order of the Government, we cannot change these terms. The Bombay Tenancy Act, Bombay Land Revenue Code and the Mamlatdar Courts Act have to be amended by legislation. Unless these terms are amended and the words Deputy Commissioner and Tahsildar are substituted in the place of the words Collector and Mamlatdar, there is bound to be a lot of confusion even as regards the disputes and land records of rights. My suggestion is that along with this Bill, amendments to the terms in the Land Revenue Code and other Acts may be brought as early as possible. With these suggestions, I sopport the Bill.

5 P.M.

ಶ್ರೀ ವೈ. ವೀರಪ್ಪ (ಹೊಳೆನರಸೀಪುರ).—ಮಾನ್ಯ ಅಧ್ಯಕ್ಷರೆ, ಈ ದೇಶದಲ್ಲಿ ಭೂಸುಧಾರಣೆ ಆಗುತ್ತಿರುವ ಕಾಲದಲ್ಲಿ ಈ ರೀತಿಯಾದ ಒಂದು ಕಾನೂನು ಅತ್ಯಾವಶ್ಯಕವಾಗಿ ಬೇಕಾಗಿದೆ. ಈ ದೃಷ್ಟಿಯಿಂದ ಈ ಮಸೂದೆಯನ್ನು ತಂದಿರುವುದು ಸಮಯೋಚಿತವಾಗಿದೆ ಎಂಬ ಅಭಿಪ್ರಾಯವನ್ನು ಪುಷ್ಟೀಕರಿಸುತ್ತೇನೆ. ಆದರೆ ಈ ಮಸೂದೆಯಲ್ಲಿರತಕ್ಕ ಕೆಲವು ಲೋಪ ದೋಷಗಳು ಸ್ವಲ್ಪಮಟ್ಟಿಗೆ ಜನರ ಮೇಲೆ ಪರಿಣಾಮಕಾರಿಯಾಗಿ, ಅಂತ್ಯದಲ್ಲಿ ಜನತೆಗೆ ಅಥವಾ ಜಮೀನಿನಲ್ಲಿ ಹಕ್ಕನ್ನಿಟ್ಟುಕೊಂಡಿರುವ ಜಮೀನ್‌ದಾರರಿಗೆ ತೊಂದರೆಯಾದೀತೆಂಬ ಶಂಕೆಯಿಂದ ನಾನು ಕೆಲವು ತಿದ್ದುಪಡಿಗಳು ಅಥವಾ ಬದಲಾವಣೆಗಳು

ಆಗುವುದು ಉಚಿತವೆಂಬ ದೃಷ್ಟಿಯಿಂದ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದೇನೆ. ಪ್ರಥಮತಃ ಈ ಮಸೂದೆಯ 3ನೆಯ ಪುಟದಲ್ಲಿ 5ನೆಯ ಖಂಡದಲ್ಲಿ, "Acquisition of rights to be reported" ಎಂಬುದರಲ್ಲಿ 'Any person acquiring by succession, survivorship, inheritance, partition, purchase, mortgage, gift, lease or otherwise, any right as holder, etc., shall report orally or in writing his acquisition of such right to the village accountant..." ಎಂದಿದೆ. ಬಹುಶಃ ಯಾರಾದರೂ ತನ್ನ ಹಕ್ಕು ಬಾಧ್ಯತೆಗಳನ್ನು ಬಾಯಿ ಮಾತಿನಲ್ಲಿ ಹೇಳಿದರೆ ಅದರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳಬಹುದು ಅಥವಾ ಇಲ್ಲದೇಯಿರಬಹುದು. ಆದುದರಿಂದ ಕಡ್ಡಾಯವಾಗಿ ಬರವಣಿಗೆಯಲ್ಲಿ ಕೊಡುವುದು ಉಚಿತವಾಗಿದೆ.

ಎರಡನೆಯದಾಗಿ, ಯಾವ ಕಾಲದಲ್ಲೇ ಆಗಲಿ ಮಾಮೂಲಾದ ಹಕ್ಕನ್ನು ನಿರ್ಧಾರ ಮಾಡಿಕೊಳ್ಳುವ ಕಾಲದಲ್ಲಿ ಒಬ್ಬ ಮನುಷ್ಯನಿಗಿಂತ ಎರಡು ಮೂರು ಜನರ ಮುಂದೆ ಮಾಡುವುದು ಉತ್ತಮ. ತನಗೆ ಈ ಹಕ್ಕಿದೆ ಎಂದು ಗ್ರಾಮಾಧಿಕಾರಿಯ ಮುಂದೆ ವರದಿ ಮಾಡುವಾಗ ಯಾವ ರೀತಿ ಮಾಡಬೇಕೆಂಬುದು ಇದರಲ್ಲಿ ಸ್ಪಷ್ಟವಾಗಿಲ್ಲ. ಈ ದೃಷ್ಟಿಯಿಂದ ಶ್ಯಾನುಭೋಗರಾಗಲಿ ಇತರ ಗ್ರಾಮಾಧಿಕಾರಿಗಳಾಗಲಿ ಆ ಸಮಯದಲ್ಲಿ ಯಾವ ರೀತಿ ಕೆಲಸ ಮಾಡಬೇಕು, ದಾಖಲಾತಿಯನ್ನು ಹೇಗಿಟ್ಟುಕೊಳ್ಳಬೇಕೆಂಬುದನ್ನು ಸ್ಪಷ್ಟಪಡಿಸಬೇಕೆಂದು ಕಾಣುತ್ತದೆ.

ಈ ಮಸೂದೆಯ 3ನೆಯ ಪುಟದಲ್ಲಿ 4ನೆಯ ಖಂಡದ (b) ಭಾಗದಲ್ಲಿ Record of Rights ಎಂಬುದರಲ್ಲಿ "the nature and extent of the respective inherents of such persons and the conditions or liabilities (if any) attaching thereto" ಎಂದು ನಮೂದಾಗಿದೆ. ಆದರೆ 4ನೆಯ ಪುಟದಲ್ಲಿ "Explanation I — The rights mentioned above include a mortgage without possession, but do not include an easement, etc." ಎಂದಿದೆ. ನಾಳೆ ಒಬ್ಬ ಮನುಷ್ಯ ತನ್ನ ಹಕ್ಕನ್ನು ನಿರ್ಧಾರ ಮಾಡುವುದಕ್ಕೆ ಕೋರ್ಟಿಗೆ ಹೋದರೆ, ಆ ಸಮಯದಲ್ಲಿ ಬಹುಕಾಲದಿಂದಲೂ ಬಂದಿರುವ ನೀರನ್ನು ತೆಗೆದುಕೊಳ್ಳುವ ಹಕ್ಕು, ಗಾಡಿ ಹೊಡೆಯುವ ಹಕ್ಕು, ಗೊಬ್ಬರ ಸಾಗಿಸುವ ಹಕ್ಕು ಮುಂತಾದ ಹಕ್ಕುಗಳನ್ನು ನಿರ್ಧಾರ ಮಾಡಬೇಕೆಂದರೆ, ಶ್ಯಾನುಭೋಗರು ಸರಿಯಾದ ಕಲಮಿನಲ್ಲಿ ಇದನ್ನು ನಮೂದು ಮಾಡದೇಯಿದ್ದರೆ ಮುಂದೆ ಅಂಥ ಹಕ್ಕಿಗೆ ಧಕ್ಕೆ ಬರಬಹುದು. ಆತನು ಇಟ್ಟಿರುವ ಲೆಕ್ಕ ಪತ್ರಗಳನ್ನು ಮೇಲ್ಪಟ್ಟವರು ನೋಡುವ ಅವಕಾಶವಿರುವುದರಿಂದ ಆರೀತಿ ನಮೂದು ಮಾಡುವುದು ಒಳ್ಳೆಯದೆಂದು ಅಭಿಪ್ರಾಯ ಪಡುತ್ತೇನೆ.

ತನ್ನ ಲೆಕ್ಕಪತ್ರಗಳನ್ನು ಸರಿಯಾದ ರೀತಿಯಲ್ಲಿ ಒಪ್ಪಿಸದೇಯಿದ್ದರೆ ಡೆಪ್ಯುಟೀಕಮೀಷನರು ದಂಡವನ್ನು ಹಾಕಬಹುದೆಂದಿದೆ. ನಮ್ಮ ಹಳ್ಳಿಯ ಜನತೆ ಸಾಮಾನ್ಯವಾಗಿ ಅರಿವಿಲ್ಲದೆ ಅಕಸ್ಮಾತ್ ವರದಿ ಮಾಡದೇಯಿದ್ದರೆ ಅನ್ಯಾಯವಾಗಿ 25ರೂಪಾಯಿ ದಂಡವನ್ನು ವಿಧಿಸುವುದು ಸೂಕ್ತವಲ್ಲ. ತನ್ನ ಹಕ್ಕು ಇದ್ದರೂ ಕೂಡ ಸಕಾಲದಲ್ಲಿ ತನ್ನ ವಿಷಯವನ್ನು ತಿಳಿಸದೇಯಿದ್ದರೆ 25ರೂಪಾಯಿ ಜುಲ್ಮಾನೆ ಹಾಕುವುದು ಉಚಿತವಲ್ಲ. ಮಾನ್ಯಸದಸ್ಯರು ಕೆಲವರು 10ರೂಪಾಯಿಗಳಿಗೆ ಇದನ್ನು ಇಳಿಸಬಹುದೆಂದು ಅಭಿಪ್ರಾಯಪಟ್ಟರು. ಆದರೆ ನನ್ನ ಅಭಿಪ್ರಾಯದಲ್ಲಿ ಲೆಕ್ಕಪತ್ರ ಕೊಡದೇಯಿದ್ದರೂ ದಂಡವನ್ನು ಹೊರಿಸುವುದು ಉಚಿತವಲ್ಲವೆಂದು ಕಾಣುತ್ತದೆ.

10ನೆಯ ಖಂಡದಲ್ಲಿ "Requisition of assistance in preparation of Maps" ಎಂಬುದರಲ್ಲಿ 'Subject to rule made in this.........Survey Officer' ಎಂದಿದೆ, ಇದರ ಪ್ರಕಾರ ವಿಲೇಜ್ ಅಕೌಂಟೆಂಟಿಗೆ ಸರ್ವೆ ಅಧಿಕಾರಿಗೆ ಇರುವ ಅಧಿಕಾರವನ್ನು ಕೊಟ್ಟರೆ ನಿಜವಾಗಿ ಆತನು ಎಷ್ಟುಮಟ್ಟಿಗೆ ಅಧಿಕಾರವನ್ನು ನೇರವೇರಿಸಬಹುದೆಂಬುದನ್ನು ಊಹಿಸಬಹುದು. ಇವರಿಗೆ ಸರಿಯಾದ ಶಿಕ್ಷಣವಿರುವುದಿಲ್ಲ. ಹೀಗಿರುವಾಗ ಸರ್ವೆ ಅಧಿಕಾರಿಗಿರುವ ಮ್ಯಾಪ್ ತಯಾರು ಮಾಡುವ ಕಾರ್ಯವನ್ನು ಇವರಿಗೆ ಕೊಟ್ಟರೆ ಖಂಡಿತವಾಗಿ ಜನರಿಗೆ ಅನುಕೂಲವಾಗುವುದಿಲ್ಲ. ಈ ದೃಷ್ಟಿಯಿಂದ ಈ ಅಧಿಕಾರವನ್ನು ಇವರಿಂದ ತೆಗೆದು ಯಾರಿಗೆ ಅನುಭವವಿರುತ್ತದೆಯೋ, ಈ ಕೆಲಸದಲ್ಲಿ ಯಾರು ತಜ್ಞರೋ ಅಂಥವರಿಗೆ ವಹಿಸುವುದು ಉಚಿತವೆಂದು ನನ್ನ ಅಭಿಪ್ರಾಯ.

ಮತ್ತೆ ಇದೇ 10ನೆಯ ಖಂಡದ (b) ಭಾಗದಲ್ಲಿ "Any Revenue Officer of a rank not lower than that of an Assistant Commissioner or of a Survey Officer.... Revenue Demand" ಎಂದಿದೆ. ಸಾಮಾನ್ಯವಾಗಿ ಎಷ್ಟೋ ಸಂದರ್ಭಗಳಲ್ಲಿ ಈ ಮ್ಯಾಪ್ ತಯಾರು ಮಾಡುವ ಅವಶ್ಯಕತೆ ಇರುವುದಿಲ್ಲ. ಒಂದು ವೇಳೆ ಬೇಕಾದರೂ ಕೂಡ ಇದನ್ನು ತಯಾರು ಮಾಡುವ ಸಂದರ್ಭದಲ್ಲಿ ಎಷ್ಟು ಖರ್ಚಾಗುತ್ತದೆ ಎಂಬುದು ಇಲ್ಲಿ ಸ್ಪಷ್ಟವಾಗಿ ನಮೂದಾಗಿಲ್ಲ. ಏನೂ ತಿಳಿಯದೇ ಇರುವವನ ಮೇಲೆ ತನಗೆ ತೋರಿದಷ್ಟು ಖರ್ಚನ್ನು ಹೊರಿಸಬಹುದು. ಆದಕಾರಣ ಈ ವಿಚಾರವನ್ನೂ ಸ್ಪಷ್ಟೀಕರಿಸುವುದು ಒಳ್ಳೆಯದೆಂದು ಕಾಣುತ್ತದೆ.

15ನೆಯ ಖಂಡದಲ್ಲಿ ಹೇಳಿರುವಂತೆ, ತನ್ನ ಹಕ್ಕನ್ನು ವಿಲೇಜ್ ಅಕೌಂಟೆಂಟ್ ಅಥವಾ ರೆವಿನ್ಯೂ ಅಧಿಕಾರಿಗಳು ನಿರ್ಧಾರ ಮಾಡಿದ ಮೇಲೆ ಕೋರ್ಟಿನಲ್ಲಿ ಆತನು ತನ್ನ ಅಧಿಕಾರವನ್ನು ಅಥವಾ ಹಕ್ಕನ್ನು ಸ್ಥಿರಪಡಿಸಲು ಅಧಿಕಾರವಿಲ್ಲ. ಇದರಲ್ಲಿ ಒಂದು ಕಟ್ಟಲೆ ಕಡ್ಡಾಯ ರೀತಿಯಲ್ಲಿಲ್ಲದೆ ಮಾಡಿರುವುದು ತೊಂದರೆ. ಕೆಲವು ವೇಳೆ ಅನ್ಯಾಯವಾಗಿ ಕೆಲಸ ನಡೆಯಬಹುದು. ಯಾವುದೋ ಆಶೋತ್ತರಗಳಿಗೆ ಒಳಪಟ್ಟು ನಿಜಾಂಶವನ್ನು ಮರೆಮಾಚುವ ಕಾರ್ಯ ನಡೆದಿದ್ದರೆ ತನಗಾದ ಅನ್ಯಾಯವನ್ನು ಪರಿಹಾರ ಮಾಡಿ ಕೊಳ್ಳಲು ಕೋರ್ಟಿಗೆ ಹೋಗುವುದು ಉಚಿತ. ಆದಕಾರಣ ಈ 15ನೆಯ ಖಂಡವಿರುವುದು ಉಚಿತವಲ್ಲ, ಇದನ್ನು ತೆಗೆದು ಹಾಕಬೇಕು.

ಇನ್ನು ಈ ಮಸೂದೆಯ 16ನೇ ಕ್ಲಾಜ್ ಈ ರೀತಿಯಾಗಿ ಇದೆ:

> "16. Any person affected by an order made under sub-section (4) or any entry under sub-section (6) of section 6, may within a period of one month from the date of communication of the order to the party, appeal to such officer as may be empowered by

(ಶ್ರೀ ವೆ೦ಕ. ವೀರಪ್ಪ)

Government in this behalf and his decision shall be final."

ಯಾವದೇ ಒಂದು ಆರ್ಡರ್ ಪಾರ್ಟಿಗೆ ತಿಳಿಸಿದ ಒಂದು ತಿಂಗಳು ಅವಧಿಯೊಳಗಾಗಿ ಅಪೀಲು ಮಾಡಬೇಕು ಎಂದು ಈ ಕ್ಲಾಜಿನಲ್ಲಿದೆ. ಅಪೀಲು ಮಾಡುವುದಕ್ಕೆ ಒಂದು ತಿಂಗಳ ಅವಧಿ ಕೊಡಲಾಗಿದೆ. ಆದರೆ ಒಂದು ತಿಂಗಳು ಅವಧಿಯು ಬದಲು ಮೂರು ತಿಂಗಳು ಅವಧಿ ಕೊಡಬೇಕು. ಒಂದು ತಿಂಗಳಿನ ಬದಲು ಮೂರು ತಿಂಗಳು ಮಾಡುವುದು ಸೂಕ್ತವೆಂದು ನಾನು ಅಭಿಪ್ರಾಯ ಪಡುತ್ತೇನೆ.

Page 11 "...Officers of the status of Aval Karkuns tour and hold on the spot enquiries, confirm undisputed entries or dispose of objections after summary enquiry. The record is maintained in the village and is open to public inspection."

ಒಂದು ಅರ್ಜಿಯ ವಿಚಾರಣೆಯಾಗಲಿ, ಇನ್‌ಸ್ಪೆಕ್ಷನ್ ಮಾಡುವುದು ಆಗಲಿ ಅದಕ್ಕೆ ಹಳ್ಳಿಗಳಲ್ಲಿ ಯಾವದೊಂದು ನಿರ್ದಿಷ್ಟವಾದ ಜಾಗವನ್ನು ಗೊತ್ತು ಮಾಡಬೇಕು. ಪಂಚಾಯಿತಿ ಕಟ್ಟೆಯಲ್ಲಿ ನಡೆಯಬೇಕೋ ಅಥವಾ ಮತ್ತೆ ಯಾವ ಜಾಗ ಎಂಬುದನ್ನು ಸ್ಪಷ್ಟಗೊಳಿಸಿಲ್ಲ. ಆದುದರಿಂದ ಇದನ್ನು ಸ್ಪಷ್ಟೀಕಾರ ಮಾಡುವುದು ಒಳ್ಳೆಯದು.

ಈ ಮಸೂದೆಯಲ್ಲಿ ಲೋಪದೋಷಗಳು ಇರುವದರಿಂದ ಇದನ್ನು ಪರಿಶೀಲನೆ ಮಾಡುವುದಕ್ಕೆ ಸೆಲೆಕ್ಟ್ ಕಮಿಟಿಗೆ ಹೋಗಿ ಬರುವುದು ಉಚಿತವೆಂದು ನನ್ನ ಅಭಿಪ್ರಾಯವಾಗಿದೆಯೆಂದು ಹೇಳಿ ನನ್ನ ಭಾಷಣವನ್ನು ಮುಕ್ತಾಯಗೊಳಿಸುತ್ತೇನೆ.

Sri M. P. PATIL (Minister for Revenue).—Sir, I am very much thankful to the Hon'ble Members for accepting this Bill and its principles. I am glad that the Hon'ble Members have realised the necessity of having such a uniform legislation for the whole of the State, in view of the fact that we are going to undertake land reform measures in the near future.

Sir, as suggested by many of the Hon'ble Members, I am thinking of moving a motion to refer this Bill to the Select Committee and therefore, I do not wish to deal with all the suggestions which can be dealt with either in the Select Committee or which can be dealt with while framing the Rules under the Bill. Therefore, I would confine my reply only to one or two points which have been raised by some of my Hon'ble friends.

My Hon'ble friend Sri V. S. Patil stated, that it would be better to have a comprehensive Bill including the provisions of this Bill Sir, I know that as far as Bombay is concerned, the provisions for the Record of Rights are embodied in the Land Revenue Code. The same is the case in Hyderabad. But in Old Mysore area, there is a separate Act for the record of rights. After studying the situation existing in all the parts, I thought that it better to have a separate legislation for this purpose.

There are some reasons for this, Sir. Supposing that we decide to have the provisions of this Bill in a comprehensive measure dealing with the matters relating to land reforms. In that case, it would have been necessary to postpone this legislation until we framed a comprehensive Bill for the land reforms, which is bound to take time. However, as the Hon'ble Members realise, we are going to have land reforms in the very near future and under the circumstances I hope you will realise, Sir, and all Hon'ble Members will realise that there is urgent necessity to have such a Bill for introducing record of rights in the villages; and that is the reason why this Bill has been moved for the introduction of record of rights in the villages.

Sir, many of the Hon'ble Members seem to be under an impression that the village accountants who are called shanubhogues in the old Mysore area, have been given more powers. It is also said that these shanubhogues are not responsible persons and that they are mischievous people, and under the circumstances, they should not be given these powers. Sir, I would like to point out in this case that as a matter of fact the shanubhogues are not given any powers under this Bill. Again we must realise that all the shanubhoguse are not mischievous. I know that some of them are. But I can also point out shanubhogues who are as honest as we are. It is no use distrusting all the shanubhogues and try to deprive them of their rights.

Sir, the other point is that, after all, we have appointed them to do some revenue work in the villages and under the impression that they are mischievous

or that they are untrained people, if we deprive them of this work, who is to do this work ?

Sri Y. VEERAPPA.—We have not said 'mischievous'.

Sri M. P. PATIL.—I am not referring only to your remarks. I am referring to the statements made by all the Hon'ble Members here. I am submitting that under these circumstances, it would not be proper to distrust these shanubhogues who are, after all, our servants. On the other hand, I would suggest that if anybody plays any mischief we must punish him. At the same time, if they are not trained, we should train them up. But as we have appointed them and as we have been paying them, it is better that we should extract work from them. I would like to follow this policy as far as this matter is concerned.

Sir, I must also mention that as a matter of fact they are not given any additional powers under this Bill. The only additional point in this Bill is that the shanubhogues will make an entry of any information given to him in the mutation register—not in the record of rights register, which are records on which we have to rely. The information or complaint given by anybody or the objection given by other parties, will be entered in the mutation register only and the shanubhogue will prepare the records for the examination by a responsible officer. The Government will appoint a responsible officer of the rank of a Deputy Thasildar or Thasildar; that is not yet decided. This responsible officer will go to the village and not only will examine the records, but will examine the parties also and he will decide whether the entry that is made is correct or not. If it is not correct, he will amend it. If it is correct, he will confirm it and certify it. Then only, it will form part of the record of rights. If this procedure is followed, I do not think any Hon'ble Member will have any objection. Some Hon'ble Members raised the question that as record of rights are not so much reliable, they should not be treated as presumptive evidence. Sir, in this matter, I beg to differ from my Hon'ble friends.

In this case we are going to examine the parties, we are going to examine the record and after examining the parties and the record, we are going to make entries in the record of rights. After making such entries, the record of rights becomes a public document. If it becomes a public document I do not see what objection there can be to produce it as a piece of evidence. If we prepare the record of rights after following all this procedure, it is but natural that this document should receive the importance which it ought to. From that point of view the provisions made in the Bill are quite correct and the record of rights should get that much importance in the matter of evidence. The provision which is there is that the copies of the record of rights will be treated as presumptive evidence and not as conclusive evidence. Supposing some entries are made in the record of rights and certified and supposing that copy is produced in any proceedings, then that will not be conclusive evidence; that will be only presumptive evidence. Some party may say that the entry is wrong. That party is free to produce evidence to rebut that evidence. Supposing some substantial evidence is produced against that entry, that entry will also be brought to the notice of the court. Supposing the court comes to the conclusion after taking evidence that the entry made in the record of rights is not correct, even the court is given power under this Bill to make a report to the revenue authorities to the effect that the entry made is not correct and that the entry should be amended in such and such a way. In this way, we want to make the record of rights as correct as possible. Under these circumstances, we want them to be treated as public documents. This is the main intention of some of the provisions of this Bill. I hope Hon'ble Members will have no objection to them provided, as I said, the record of rights are examined and verified by responsible officers. On the whole, this is the main object of this Bill.

Of course, the other points mentioned by some of the Hon'ble

(SRI M. P. PATIL)

Members are worth consideration and the Select Committee will take those suggestions into consideration and make the necessary changes in the present provisions of the Bill. Therefore, I do not want to refer to them.

With these remarks I hope the Hon'ble House will accept this Bill as it is as far as the principles of the Bill are concerned.

MR. SPEAKER.—Motion moved:

"That the Mysore Land Record of Rights Bill, 1958 be taken into consideration."

The motion was adopted.

Motion to refer.

SRI M. P. PATIL.—Sir, I beg to move:

"That the Mysore Land Record of Rights Bill, 1958, be referred to a Select Committee consisting of the following members:—

1 The Minister for Law
2 Sri A. Bheemappa Naik
3 ,, B. D. Jatti
4 ,, K. Puttaswamy
5 ,, Basangowda
6 ,, K. Mallappa (Coorg)
7 ,, Manjaya Shetty
8 ,, B. N. Boranna Gowda
9 ,, K. Kenchappa
10 ,, B. K. Puttaramiah
11 ,, B. R. Patil
12 ,, V. S. Patil and
13 the mover

with instructions to report to the House within 10 days."

MR. SPEAKER.—Motion moved:

"That the Mysore Land Record of Rights Bill, 1958, be referred to a Select Committee consisting of the following members:—

1 The Minister for Law
2 Sri A. Bheemappa Naik
3 ,, B. D. Jatti
4 ,, K. Puttaswamy
5 ,, Basangowda
6 ,, K. Mallappa (Coorg)
7 ,, Manjaya Shetty
8 ,, B. N. Boranna Gowda
9 ,, K. Kenchappa
10 Sri B. K. Puttaramiah
11 ,, B. R. Patil
12 ,, V. S. Patil and
13 the mover

with instructions to report to the House within 10 days."

The motion was adopted.

MR. SPEAKER.—I appoint Sri M. P. Patil, Minister for Revenue, as the Chairman of the Committee.

MYSORE COURT FEES AND SUITS VALUATION BILL, 1957.

Motion to consider.

SRI B. VAIKUNTA BALIGA (Minister for Labour and Legal Affairs).—Sir, I beg to move:

"That the Mysore Court Fees and Suits Valuation Bill, 1957, as reported by the Select Committee, be taken into consideration."

MR. SPEAKER.—Motion moved:

"That the Mysore Court Fees and Suits Valuation Bill, 1957,as reported by the Select Committee be taken into consideration."

SRI B. VAIKUNTA BALIGA.—Sir, I have absolutely no doubt in my mind that every one of the Hon'ble Members has read the Bill, studied it and read the Report because the Report has been fairly detailed. I may also mention for the information of the House that there have been eight sittings at which considerable time has been spent and all possible thought then available has been bestowed and the Bill has been modified to the extent that is reported in the Report. May I bring to the notice of the House that there are nearly 24 changes which have been brought about and there is no substantial reduction in the levels of taxation proposed in the Bill. I do not think it will be necessary for me to read the whole Report or to get into great details except to say that that even the most controversial points as they were supposed to be, namely, the valuation of the market value for the purpose of computing court fees, no longer remain